# ಮಿಸ್(ಸ್) ವರ್ಡ...

ಮನೆ ತುಂಬಾ ಶಾಂತವಾಗಿತ್ತು, ಯಾವತ್ತೂ ಇರುವುದಿಲ್ಲ, ಇಂದೇಕೊ ಇದೆ, ಒಳ್ಳೆಯದೇ... ಅಂತ ನನ್ನ ಮೆಚ್ಚಿನ ಪುಸ್ತಕದ ಓದಿನಲ್ಲಿ ತಲ್ಲೀನನಾಗಿದ್ದೆ. ಅಚ್ಚುಮೆಚ್ಚಿನ ಪುಸ್ತಕವೆಂದರೆ ಪಕ್ಕದಮನೆ ಪದ್ದು ಪಕ್ಕ ಇದ್ದರೂ ಗೊತ್ತೇ ಇಲ್ಲದಂತೆ ಅದರಲ್ಲಿ ಮುಳುಗಿರುತ್ತೇನೆ. ಒಮ್ಮೆಲೆ ಇವಳ ದನಿ ಕೇಳಿತು "ಲೋ ಪಾಪಿ ಎಲ್ಲಿದೀಯಾ, ನನ್ನ ಫೇರ್ ಆ್ಯಂಡ ಲವ್ಲೀ ಕ್ರೀಮ್ ಎಲ್ಲ ಮುಗಿಸಿ ಹಾಕೀದೀಯಾ" ಅಂತ ಚೀರುತ್ತಿದ್ದಳು. ಇದ್ಯಾವ ಪಾಪಿಗಳ ಲೋಕದಲ್ಲಿ ಬಂದೆ ಅಂದುಕೊಂಡಿರಾ. ಆ ಪಾಪಿ ಮತ್ತಾರೂ ಅಲ್ಲ, ಅವಳ ತಮ್ಮ. ಪುಟ್ಟ ಪಾಪ ಇದ್ದಾಗಿನಿಂದ ಪಾಪು ಅಂತ ಕರೆದು ಕರೆದು ಈಗ ಪಾಪಿ ಅನ್ನುವ ಮಟ್ಟಿಗೆ ಬೆಳೆದುನಿಂತಿದ್ದಾನೆ. ಆ ಪಾಪಿ ಅಲ್ಲಲ್ಲ, ಪಾಪು ಕ್ರೀಮು ಖಾಲಿ ಮಾಡಿದ್ದೇಕೆ?. ಪಾಪುವಿಗೆ ಬಾಲ್ಯವಿವಾಹ ಮಾಡುತ್ತಿದ್ದಾರೆ!, ಪುಟ್ಟ ಪಾಪ ಅಂದರೆ ಬಾಲ್ಯವಿವಾಹವೇ ತಾನೆ. ಹಾಗಂತ ಹೇಳಿ ಹಲವು ಸಾರಿ ಇವಳಿಂದ ಬೈಸಿಕೊಂಡಿದ್ದರೂ ನಾನು ಹಾಗೇ ಕರೆಯುವುದು. ಪಾಪುವಿಗೆ ಹುಡುಗಿ ಗೊತ್ತಾಯಿತೋ ಆಗಲೇ ನಾನು "ಲೋ **ರವೆ ಉಂಡೆ ಪಕ್ಕ ರಾಗಿ ಮುದ್ದೆ ಇಟ್ಟ ಹಾಗೆ ಇದೆ ನಿಮ್ಮ ಜೋಡಿ**" ಅಂತ ಕಾಡಿಸಿದ್ದೆ. ಹುಡುಗಿ ನೋಡಲು ಸುಂದರಿ, ಪಾಪು ನೋಡಲು ಸ್ವಲ್ಪ ಕಪ್ಪು, ಆದರೆ ಮುಖದಲ್ಲಿ ಖಳೆ ಇದೆ ಅನ್ನುವುದಂತೂ ಒಪ್ಪಲೇ ಬೇಕು, ಆದರೂ ಕಾಡಿಸಲಿಕ್ಕೇನೀಗ ಅಂತ ಕಾಲೆಳೆದಿದ್ದೆ. ಏನು ಮಾಡೊದು ನಮ್ಮಲ್ಲಿ ಹುಡುಗ ಹೇಗಿದ್ದರೂ ಸರಿ ಮಿಸೆಸ್ ಮಾತ್ರ ಮಿಸ್ ವರ್ಡನಂತೆ ಸುಂದರಿಯೇ ಆಗಿರಬೇಕು.

ಅವನಿಗಾಗಿ ಹುಡುಕಾಡಿ ಸುಸ್ತಾಗಿ ಬಂದು ಕೂತಳು ನನ್ನಾಕೆ, ಫೋನು ಮಾಡಿ ನೋಡು ಸಿಕ್ತಾನೆ ಅಂದೆ. ದುರುಗುಟ್ಟಿ ನೋಡಿದಳು. ಕ್ರೀಮ್ ಖಾಲಿ ಮಾಡಿದ್ದು ಕೇಳಲು ಫೋನು ಮಾಡುವುದಾ ಅಂತ. "ಸರಿ ಬಿಡು, ಹುಡುಗರಿಗೆ ಎಂಗೇಜಮೆಂಟ್ ಆಗ್ತಿದ್ದಂಗೆ ಅವರ ಮೊಬೈಲ್ ಫೋನೂ ಎಂಗೇಜ್ ಆಗಿಬಿಡತ್ತೆ, ಅವನಂತೂ ಸಿಗಲ್ಲ" ಅಂದಿದ್ದಕ್ಕೆ ನಸುನಕ್ಕು, "ರೀ ನೀವು ಹುಡುಗರಂತೂ ತೀರಾ ಅತಿಯಾಗಿ ಮಾಡ್ತೀರಾ. ರಾತ್ರಿ ಊಟ ಏನು ಮಾಡಿದೆ ಅಂತ ಕೇಳಲು ಫೋನು ಮಾಡಿ ಮುಂಜಾನೆ ಬ್ರೇಕ್‌ಫಾಸ್ಟ ಟೈಮ್‌ವರೆಗೂ ಮಾತಾಡ್ತೀರಾ" ಅಂತ ನನ್ನ ಮೇಲೆ ರೇಗಿದಳು. "ಹ್ಮ್ ಅದೆಲ್ಲ ನಿಮ್ಮಿಂದಾಗೇ, ನಾವೇನೊ ಊಟ ಆಯ್ತಾ ಅಂತ ಕೇಳಿ ಸುಮ್ಮನಾಗ್ತೀವಿ. ನೀವು ಹಾಗಲ್ಲ, ಏನು ಊಟ?, ಚಪಾತಿನಾ? ಯಾಕೆ ಅನ್ನ ಇಲ್ವಾ?, ಎಷ್ಟು ತಿಂದಿರಿ?, ಮೂರಾ?, ಬಕಾಸುರನ ವಂಶಾನಾ ನಿಮ್ದು? ನಂಗೆ ಚಪಾತಿ ಮಾಡೋಕೆ ಬರಲ್ಲ ಕಣ್ರೀ... ಅಂತ ಪಾಕ ಪುರಾಣ ತೆಗೆದುಬಿಡ್ತೀರಾ" ಅಂತ ತಿರುಗೇಟು ನೀಡಿದ್ದಕ್ಕೆ ಸುಮ್ಮನಾದಳು. "ಸರಿ ಈಗ ಅವನಿಗೆ ಕ್ರೀಮ್ ಹಚ್ಚಿಕೊಂಡು ಬೆಳ್ಳಗೆ ಆಗು ಅಂತ ಐಡಿಯಾ ಕೊಟ್ಟಿದ್ದು ನೀವೇ ತಾನೆ?" ಅಂತ ಮರುವಿಷಯಕ್ಕೆ ಬಂದಳು. ಮೆಲ್ಲಗೆ ಮುಗುಳ್ನಕ್ಕೆ, ನಾನೇ ಅದು ಅನ್ನುವುದನ್ನು ಒಪ್ಪಿಕೊಂಡು. "ನಂಗೊತ್ತಿತ್ತು, ನಮ್ಮ ಮದುವೆ ಮುಂಚೆ ಮನೇಲಿರೊ ಸೌತೆಕಾಯಿ ಎಲ್ಲ ನಿಮ್ಮ ಫೇಸ್‌ಪ್ಯಾಕ್ ಆಗುತ್ತಿತ್ತು ಅಂತ ನಿಮ್ಮ ತಂಗಿ ಹೇಳಿದ್ದಳಲ್ಲ. ಇಂಥ ಐಡಿಯಾ ನಿಮ್ಮದಲ್ಲದೇ ಮತ್ತಾರದು" ಅಂತ ನನ್ನ ಇತಿಹಾಸ ಕೆದಕಿದಳು. ಇಂಥ ಸಿಕ್ರೇಟುಗಳನ್ನೆಲ್ಲ ಹೊರಗೆಡವಿದ್ದಕ್ಕೆ ತಂಗಿಯನ್ನು ಶಪಿಸುತ್ತ "ನಾನು ನ್ಯಾಚುರಲ್ಲಿ ಸ್ಮಾರ್ಟ್ ಇದ್ದೆ" ಅಂತ ಹೊಗಳಿಕೊಂಡೆ. "ರೀ ಹುಡುಗರಿಗೆ ಅಂದ ಚಂದ ಯಾರು ನೋಡ್ತಾರೆ, ಕೈಕಾಲು ನೆಟ್ಟಗಿದ್ದು, ಕೆಲಸ, ಕೈತುಂಬ ಸಂಬಳ, ಕುಟುಂಬ, ಒಳ್ಳೆ ಮಾನ, ಮನೆತನ ಇದ್ರೆ ಮುಗೀತು" ಅಂತನ್ನುತ್ತ ಅಲ್ಲಿಂದ ಜಾಗ ಖಾಲಿ ಮಾಡಿದಳು, ನನ್ನ ತಲೆಯಲ್ಲಿ ಹುಳುಬಿಟ್ಟ ಹಾಗೆ ಆಯ್ತು.

ಹುಡುಗರಿಗೆ ಅಂದ ಚಂದ ಏನೂ ಬೇಕಿಲ್ವಾ, ಯಾಕೆ? ಅಂತ ಯೋಚನೆ ಶುರುವಾಯಿತು. ಈಗ ಹೇಳಿದವರನ್ನೇ ಕೇಳಿದರಾಯ್ತು ಅಂತ ಅವಳಲ್ಲಿಗೆ ನಡೆದೆ. "ನೀನು ನನ್ನ ಯಾಕೆ ಮದುವೆ ಆದೆ ಹಾಗಿದ್ರೆ?" ಅಂತ ನೇರ ಪ್ರಶ್ನೆ ಎಸೆದೆ. ತಲೆಯಿಂದ ಬುಡದವರೆಗೆ ಒಂದು ಸಾರಿ ನೋಡಿ "ಹ್ಮ್, ನಮ್ಮಪ್ಪ ಹುಡುಗ ಸಾಫ್ಟವೇರ್ ಇಂಜನೀಯರು, ಒಳ್ಳೆ ಮನೆತನ, ಇನ್ನೇನು ಜಾಸ್ತಿ ನೋಡೋದು ಮದುವೆ ಆಗು ಅಂದ್ರು, ಓಕೇ ಅಂದೆ" ಅಂತಂದಳು. "ಹೌದಾ?" ಅಂತ ಪೆಚ್ಚುಮೋರೆ ಹಾಕಿ ಹೊರ ನಡೆದೆ, ಕೈಹಿಡಿದು ಎಳೆದು "ಹುಡುಗ ಸ್ಮಾರ್ಟು, ಕ್ಯೂಟಾಗೂ ಇದ್ದ" ಅಂತ ಹುಬ್ಬುಹಾರಿಸಿದಳು. "ಸುಮ್ನೆ ಬೆಣ್ಣೆ ಸವರಬೇಡ, ನೋಡೊಕೆ ಚಿಂಪಾಂಜಿ ಕೂಡ ಕ್ಯೂಟ್ ಆಗೇ ಇರ್ತದೆ." ಅಂತ ಬೇಜಾರಾದರೆ. ತಲೆ ಕೂದಲು ಹಾಗೆ ಬಾಚಿದಂತೆ ಸವರಿ ಸ್ಟೈಲ್ ಮಾಡಿ "ಆದರೆ ಈ ಚಿಂಪಾಂಜಿ ಸ್ಮಾರ್ಟ ಕೂಡ ಇದೆ." ಅಂತ ನಕ್ಕಳು, ನಾನೂ ನಕ್ಕೆ.

"ಸರಿ ಬಿಡು, ಹುಡುಗೀರು ಹುಡುಗ ಶ್ರೀಮಂತ ಆಗಿದ್ರೆ ಓಕೆ ಅಂತಾರೆ, ಅಂದ ಹಾಗಾಯ್ತು." ಅಂದ್ರೆ, "ರೀ ಅದು ಹಾಗಲ್ಲ, ಒಂದು ಹುಡುಗಿಗೆ ಹುಡುಗನ್ನ ಹುಡುಕೋವಾಗ ಆರ್ಥಿಕ ಸಬಲತೆ ಮುಖ್ಯ ಆಗ್ತದೆ, ನಾಳೆ ಹೆಂಡತಿನಾ ಚೆನ್ನಾಗಿ ನೋಡ್ಕೊತಾನಾ ಇಲ್ವಾ, ಹುಡುಗನ ಸ್ವಭಾವ ಹೇಗೆ, ಮನೆತನ ಹೇಗೆ, ಅದಾದಮೇಲೆ ರೂಪಕ್ಕೆ ಮನ್ನಣೆ, ಆದರೆ ರೂಪಕ್ಕೆ ಅಷ್ಟು ಪ್ರಾಮುಖ್ಯತೆ ಇರೋದೇ ಇಲ್ಲ, ಲಕ್ಷಣವಾಗಿದ್ರೆ ಆಯ್ತು, ಅಂತಾರೆ ಶಹರದಲ್ಲಿ ಹುಡುಗೀರು ಹುಡುಗ ನೋಡೊಕೂ ಚೆನ್ನಾಗೂ ಇರಬೇಕು ಅಂತಾರೆ ಅದು ಬೇರೆ ಮಾತು" ಅಂದ್ಲು. "ಅದಕ್ಕೇ ಸುಂದರ ಹುಡುಗಿಯರು ಶ್ರೀಮಂತರನ್ನು ಮದುವೆಯಾಗಿಬಿಡುವುದು, ತನ್ನಂತೇ ಸುಂದರ ಹುಡುಗನನ್ನು ಮದುವೆ ಆಗಬೇಕು ಅಂತ ನಿಮಗೆ ಅನ್ನಿಸುವುದೇ ಇಲ್ವಾ?" ಅಂತ ಅವಳನ್ನೇ ಕೇಳಿದೆ, "ನಿಮಗೆ ಹೇಗೆ ಮಿಸ್ ವರ್ಡ ಬೇಕು ಅಂತ ಆಸೆ ಇರ್ತದೊ, ನಮಗೂ ಹಾಗೆ ಆಸೆಗಳು ಇರ್ತವೆ ಆದ್ರೆ ಜೀವನದಲ್ಲಿ ಸ್ವಲ್ಪ ಹೊಂದಾಣಿಕೆ ಅನಿವಾರ್ಯ ಆಗ್ತದೆ, ವರದಕ್ಷಣೆ ಕೊಡಲಾಗದೊ, ಮತ್ತೆ ಒಳ್ಳೆ ವರ ಸಿಕ್ಕಾನೊ ಇಲ್ವೋ ಅನ್ನೊ ಭೀತಿಯಲ್ಲಿ ತಂದೆ ತಾಯಿ ಕೂಡ ಒತ್ತಾಯ ಮಾಡಿ ಮದುವೆ ಮಾಡಿ ಬಿಡ್ತಾರೆ" ಅಂತ ಮನ ಬಿಚ್ಚಿಟ್ಟಳು. "ಬಡವರ ಮನೆಯಲ್ಲಿ ಸುಂದರ ಹುಡುಗಿ ಹುಟ್ಟುವುದೇ ತಪ್ಪು ಅನ್ನು." ಅಂದರೆ. "ಬಡವರ ಮನೆಯಲ್ಲಿ ಕುರೂಪಿಯಾಗಿ ಹುಟ್ಟುವುದು ಇನ್ನೂ ತೊಂದ್ರೆ, ಸುಂದರವಾಗಿದ್ರೆ ಹೇಗೊ ಮದುವೆಯಾಗುತ್ತದೆ" ಅಂತ ಇನ್ನೊಂದು ಹೆಜ್ಜೆ ಮುಂದೆ ಹೋದಳು. "ಆದರೆ ರೂಪ ಅವಳ ಕೈಲಿಲ್ಲವಲ್ಲ ಹುಟ್ಟಿನಿಂದ ಬಂದಿದ್ದು, ಅವಳದೇನು ತಪ್ಪು... ಹಾಗೇ ಒಬ್ಬ ಪೆದ್ದ, ಹುಟ್ಟಿನಿಂದಲೇ ಬುದ್ಧಿ ಕಮ್ಮಿ, ನೋಡಲು

ಸುಂದರ ಏನು ಪ್ರಯೋಜನ, ಆರ್ಥಿಕವಾಗಿ ತನ್ನನ್ನು ತಾನು ನೋಡಿಕೊಳ್ಳಲಾಗಲ್ಲ ಇವರೆಲ್ಲರ ಬಗ್ಗೆ ಏನು ಹೇಳೊದು" ಅಂತ ಸುಮ್ಮನಾದೆ.

"ನೋಡ್ರೀ ಹುಡುಗಿಗೆ ರೂಪ, ಹುಡುಗನಿಗೆ ಪ್ರತಿಭೆ ಮುಖ್ಯ, ಈಗೇನು ಹಿಂದಿನ ಕಾಲದಲ್ಲೂ ಹೀಗೇ ಇತ್ತು, ಶೌರ್ಯ ಪರಾಕ್ರಮಿ ರಾಜರಿಗೇ ಸುಂದರ ರಾಣಿಯರನ್ನು ಮದುವೆ ಮಾಡಿಕೊಡಲಾಗುತ್ತಿತ್ತು. ಈಗ ಶೌರ್ಯ ಧೈರ್ಯ ಎಲ್ಲ ಕೇಳದೇ ಸಂಬಳ, ಸಂಪತ್ತು ಕೇಳ್ತಾರೆ" ಅಂತ ವಿವರಿಸಿದರೂ ಇನ್ನೂ ನನ್ನ ಪ್ರಶ್ನೆಗಳು ಮುಗಿದಿರಲಿಲ್ಲ. "**ರೂಪ ವಯಸ್ಸಿನೊಂದಿಗೆ ಕ್ಷಯಿಸಿ ಹೋಗ್ತದೆ, ಹಣ ವ್ಯಯಿಸಿ ಹೋಗ್ತದೆ** ಇವುಗಳ ಮೇಲೆ ಸಂಬಂಧಗಳ ನಿರ್ಧಾರ ಎಷ್ಟು ಸರಿ" ಅಂದರೆ. "ಹಾಗಾದ್ರೆ ನೀವು ಯಾಕೆ ಕುರೂಪಿಯಾದರೂ ಗುಣವಂತ ಹುಡುಗಿ ಇದ್ರೆ ಸಾಕು ಅಂತ ಯಾಕೆ ಅನ್ನಲಿಲ್ಲ, ಹಾಗೆಯೇ ಗುಣ, ವ್ಯಕ್ತಿತ್ವ ಒಳ್ಳೆಯದು ಇದ್ರೆ ಸಾಕು ಹುಡುಗ ಬಡವನಾದರೂ ಸರಿ ಅಂತ ನಾನ್ಯಾಕೆ ಅನ್ನಲಿಲ್ಲ" ಅಂತ ಕೇಳಿದಳು. "ನಾನು ಹಾಗೆ ಅಂತಿದ್ದೆ ಏನೊ, ಆದ್ರೆ ಅದ್ಕೆ ಮುಂಚೆ ನೀನು ಸಿಕ್ಕು ಒಪ್ಪಿಬಿಟ್ಟೆ" ಅಂತ ಡೈಲಾಗು ಹೊಡೆದೆ. "ನಾನಿದ್ದರೂ ಇನ್ನೂ ಪಕ್ಕದಮನೆ ಪದ್ದು ಮೇಲೆ ಆಸೆ ಇದೆ, ನೀವು ಹಾಗೆ ಹೇಳ್ತಾ ಇದ್ರಾ" ಅಂತ ತಲೆ ಅಲ್ಲಾಡಿಸಿದಳು. ನಸುನಗುತ್ತ "ಎಷ್ಟು ಜನ ಮಿಸ್ ವರ್ಡ್ಲೇ ಬೇಕು ಅಂತ ಹುಡುಕುತ್ತ ಹೋಗಿ, ಕೊನೆಗೆ ಸಿಕ್ಕಿದವಳೇ ಸುಂದರಿ ಅಂತ ಮದುವೆಯಾಗಿಲ್ಲ" ಅಂತ ವಾಸ್ತವಕ್ಕಿಳಿದೆ. "ಅದನ್ನೇ ನಾನು ಹೇಳಿದ್ದು, ಅದೆಲ್ಲ ಅವರವರ ಅನುಕೂಲಕ್ಕೆ ತಕ್ಕಂತೆ ಸಂಬಂಧಗಳು ಕೂಡುತ್ತವೆ, ಕೆಲವರು ಕಲಿತು ಕೆಲಸ ಮಾಡುವ ಹುಡುಗಿ ನೋಡಲು, ಲಕ್ಷಣವಾಗಿದ್ದರೆ ಸಾಕು ಅಂದರೆ, ರೂಪವತಿಯಾಗಿದ್ದರೆ ಸಾಕು ಓದಲು ಬಾರದಿದ್ದರೂ ಸರಿ ಅಂತ ಮತ್ತೊಬ್ಬರು. ಹಾಗೇ ಹುಡುಗ ಹೇಗಿದ್ದರೂ ಸರಿ ಶ್ರೀಮಂತನಾಗಿದ್ದರೆ ಸಾಕು ಅಂತ ಕೆಲವರೆಂದರೆ, ಬಡವನಾದರೂ ಸರಿ ಗುಣವಂತ ಬೇಕೆಂದು ಮತ್ತೊಬ್ಬರು. ಆಸ್ತಿ ಅಂತಸ್ತುಗಳಿಗೆ ಕೆಲವರು ಒಪ್ಪಿದರೆ, ವರದಕ್ಷಿಣೆಗೆ ಇನ್ನೊಬ್ಬರು." ಅಂತ ವಿಷಯಕ್ಕೆ ವಿರಾಮ ಹಾಕಿದಳು.

ಹುಡುಗರು ಹಾಗೇನೇ, ಮದುವೆಯಾಗಲು ಹುಡುಗಿ ಸುಂದರಿಯಾಗಿರಬೇಕೆಂದೇ ಬಯಸುತ್ತೇವೆ, ನಾವು ಹೇಗಿದ್ದರೂ ಸರಿ. ಹುಡುಕುತ್ತ ಹೊರಟು, ಹೊತ್ತುಗಳೆದಂತೆ ಹುಡುಗಿ ಸಿಕ್ಕರೆ ಸಾಕು ಅಂತ ತೀರ್ಮಾನಕ್ಕೆ ಬಂದು, ರಾಜಿಯಾಗಿಬಿಡುತ್ತೇವೆ. ರೂಪ ದಿನಗಳೆದಂತೆ ಕಳೆದುಹೋಗಬಹುದಾದರೂ, ಇರುವಷ್ಟು ದಿನವಂತೂ ಮನ್ನಣೆ ಪಡೆದೇ ಪಡೆಯುತ್ತದೆ. ಎಲ್ಲೋ ಓದಿದ ನೆನಪು ರೂಪವತಿ ಯುವತಿಯರು, ಪ್ರತಿಭಾವಂತ ಪುರುಷರ ಎಲ್ಲೆಡೆ ಸಲ್ಲುವರು ಅಂತ. ವ್ಯಕ್ತಿತ್ವ, ನೀತಿ, ನಿಯತ್ತು ಎಲ್ಲದರ ಬಗ್ಗೆ ಮಾತಾಡಿದ ಹುಡುಗ ಕೊನೆಗೆ ಕಂಪನಿಯಲ್ಲಿ ಕೆಲಸಕ್ಕಾಗಿ ಮಾಲಿಕನ ಮಗಳನ್ನು ಒಪ್ಪಬಹುದು. ತನಗೆ ಅನುರೂಪನಾದ ಹುಡುಗನನ್ನು ಇಷ್ಟಪಟ್ಟ ಹುಡುಗಿ, ಅವನಿಗೆ ಕೆಲಸವಿಲ್ಲ, ನಿಲ್ಲಲು ನೆಲೆಯಿಲ್ಲ ಅಂತ ನಿಲುವು ಬದಲಿಸಬಹುದು. ಮದುವೆ ಒಂದು ಬರೀ ಭಾವನಾತ್ಮಕ ಸಂಬಂಧವಲ್ಲ, ಸಾಮಾಜಿಕ ಬಂಧನ ಕೂಡ, ಅಲ್ಲಿ ಸಮಾಜದ ಎಲ್ಲ ನಿಯಮಗಳೂ ಅನುಗುಣವಾಗುತ್ತವೆ, ಜಾತಿ, ನೀತಿ, ಆಸ್ತಿ, ಅಂತಸ್ತು ಎಲ್ಲವೂ ಗಣನೆಗೆ ಬರುತ್ತದೆ. ಹುಡುಗಿಯರೂ ಆರ್ಥಿಕವಾಗಿ ಸಬಲರಾಗುತ್ತಿರುವುದರಿಂದ ಹುಡುಗ ಸುಂದರನೂ ಆಗಿರಲಿ ಅಂತ ಹುಡುಗಿಯರೂ ಕೇಳುತ್ತಿದ್ದಾರೆ, ಒಬ್ಬಂಟಿಯಾಗಿ ಜೀವನ ನಿಭಾಯಿಸುವುದು ಕಷ್ಟವಾಗಿರುವ ಹುಡುಗರು, ಕಲಿತು ಕೆಲಸ ಮಾಡುವ ಹುಡುಗಿಯಾದರೆ ರೂಪವತಿಯೇ ಆಗಿರಬೇಕೆಂದೇನಿಲ್ಲ ಅಂತ ಬದಲಾಗುತ್ತಿದ್ದಾರೆ ಕೂಡ.

"ಹ್ಮ, ಪಾಪು ಕಪ್ಪಗಿದ್ದು, ಆ ಹುಡುಗಿ ಬೆಳ್ಳಗಿದ್ದರೇನಾಯ್ತು, ಕಪ್ಪನೇ ಟೀ ಕುದಿಸಿ ಅದಕ್ಕೆ ಬೆಳ್ಳನೇ ಹಾಲು ಹಾಕಿದಾಗಲೇ ಸೂಪರ ಟೀ ಆಗೊದು ಅಲ್ವಾ" ಅಂದೆ. "ರೀ, ಟೀ ಬೇಕಿದ್ರೆ ನೇರವಾಗಿ ಕೇಳಿ ಸುತ್ತು ಬಳಸಿ ಎಲ್ಲ ಬೇಡ" ಅಂತ ನೀರು ಹಾಕಿ ಪಾತ್ರೆ ಗ್ಯಾಸ ಸ್ಟವ್ ಮೇಲೆ ಇಟ್ಟಳು. "ಕಪ್ಪಗಿದ್ದವರ ಮುಖದಲ್ಲಿ ಖಳೆ ಇರ್ತದೆ, ನಮ್ಮಜ್ಜ ಏನಂತಿದ್ರು ಗೊತ್ತಾ ಪರಮನಂಟ್ ಕಲರು ಇದು, ಬಿಸಿಲಿರಲಿ, ಚಳಿಯಿರಲಿ ಒಂಚೂರೂ ಬದಲಾಗಲ್ಲ ಅಂತ." ಅಂತಿದ್ದರೆ "ನನ್ನ ಮುಂದೆ ಹೀಗೆ ಅಂತೀರಾ, ಆ ನನ್ನ ತಮ್ಮ ಪಾಪು ಕಂಡ್ರೆ ನಿಮ್ಮ ಜೋಡಿ ಬ್ಲಾಕ ಆ್ಯಂಡ್ ವೈಟ್ ಟೀವೀ ಆಯ್ತಲ್ಲೊ ಅಂತ ಗೋಳುಹೊಯ್ಕೊತೀರಾ. ಅದಕ್ಕೇ ಕ್ರೀಮ ಪೂರಾ ಖಾಲಿ ಮಾಡಿ, ಪೌಡರ ಬಡಿದುಕೊಂಡು ಹಿಟ್ಟಿನಲ್ಲಿ ಬಿದ್ದ ಇಲಿಯ ಹಾಗೇ ಓಡಾಡ್ತಾ ಇರ್ತಾನೆ ಅವನೀಗ." ಅಂತ ಬಯ್ದಳು, ಅಲ್ಲಿಗೆ ಅವನು ಬರುವುದಕ್ಕೂ ಸರಿ ಹೋಯ್ತು. ಅಕ್ಕ, ತಮ್ಮ ಕ್ರೀಮು ಖಾಲಿ ಮಾಡಿದ್ದಕ್ಕೆ ಕಿತ್ತಾಡಿದರು, ಟೀ ಕುಡಿಯುತ್ತ ಕೂತು ಖುಶಿಪಟ್ಟೆ! "ಭಾವ ಈಗ ನೀವೇ ಹೇಳಿ, ಸುಂದರವಾಗಲು ನಾನೇನು ಮಾಡ್ಲಿ ಅಂತ" ನನ್ನನ್ನೇ ಕೇಳಿದ. "ಆ ಹುಡುಗಿ ರೂಪ ನೋಡಿದರೂ ನಿನ್ನ ಮೆಚ್ಚಿ ತಾನೆ ಮದುವೆಯಾಗ್ತಾ ಇರೋದು, ಇಲ್ಲದಿದ್ದರೆ ಬೇಡ ಅಂತ ಹೇಳಬಹುದಿತ್ತೊ ಇಲ್ವೊ, ಹೇಳಿಲ್ಲವೆಂದರೆ ಇನ್ನೇನೊ ಇಷ್ಟವಾಗಿದೆ. ಹಾಗಿರುವಾಗ ಚಿಂತೆ ಬಿಡು. ಒಂದು ಗೊತ್ತಾ, ನಮ್ಮಜ್ಜ ನಮ್ಮಜ್ಜಿನಾ ಮದುವೆ ಆದಾಗ ಕಾಗೆ ಬಾಯಲ್ಲಿ ಅಕ್ಕಿರೊಟ್ಟಿ ಕೊಟ್ಟಹಾಗೆ ಆಯ್ತಲ್ಲ ಅಂತ ಜನ ಮಾತಾಡಿದ್ದರಂತೆ, ಆದರೆ ನಮ್ಮಜ್ಜ ಅವರನ್ನು ಎಷ್ಟು ಚೆನ್ನಾಗಿ ನೋಡಿಕೊಂಡರೆಂದರೆ, ನನಗೆ ಈಗ ಅಷ್ಟು ಒಳ್ಳೇ ಬೇರೆ ಗಂಡ ನಮ್ಮಜ್ಜಿಗೆ ಸಿಕ್ತಾ ಇರಲಿಲ್ಲ ಅನ್ನಸ್ತೆ." ಅಂತ ಸಮಾಧಾನಿಸಿದೆ ಅವನ ಮುಖದೊಂದಿಗೆ ನನ್ನವಳ ಮುಖ ಕೂಡ ಅರಳಿತು. ಹುಡುಗಿ ಫೋನು ಕರೆ ಬಂತೆಂದು ಅವನು ಓಡಿದ. "ನಂಗೆ ಕೂಡ ಈ ಕೀಟಲೆ ಮಾಡೋ ಕೋತಿಗಿಂತ ಒಳ್ಳೆ ಹುಡುಗ ಸಿಕ್ತಾ ಇರಲಿಲ್ಲ" ಅಂತ ಅಪ್ಪಿ ಪಪ್ಪಿ ಕೊಟ್ಟಳು. "ಛೇ ನೀನು ಸಿಗುವ ಮುಂಚೆ ಪಕ್ಕದಮನೆ ಪದ್ದು ಏನಾದ್ರೂ ನನ್ನ ಕಣ್ಣಿಗೆ ಕಾಣಿಸಿದ್ದಿದ್ರೆ... " ಅಂತಿದ್ದಂಗೇ, ಲಟ್ಟಣಿಗೆ ತೆಗೆದುಕೊಂಡು ಬೆನ್ನು ಹತ್ತಿದಳು...

ಇಷ್ಟೊತ್ತು ಓದಿದ್ದು ಇಷ್ಟಾ ಆದ್ರೆ ಮೆಚ್ಚಿ, ಸಿಟ್ಟು ಬಂದಿದ್ರೆ ಚುಚ್ಚಿ ಇಂಚೆ (ಇ-ಅಂಚೆ) ಹಾಕಿ... ನನ್ನ ವಿಳಾಸ pm@telprabhu.com .
ಹೀಗೆ ನೀವು ಓದಿ ಖುಶಿಯಾಗಿದ್ರೆ ನಿಮ್ಮ ಗೆಳೆಯರಿಗೂ ಇದನ್ನ ಕಳಿಸಿ, ಸಂತೋಷ ಇರೋದೇ ಹಂಚೋಕೆ ತಾನೆ...

**http://blog.telprabhu.com**